## ವಾರದ ಪತ್ರ

## ಕತೆಯು ಮುಗಿದೇ ಹೋದರೂ...

ಝೀ ಕನ್ನಡ ವಾಹಿನಿಯಲ್ಲಿ ಬಿತ್ತರವಾಗುತ್ತಿರುವ ಜೋಡಿ ಹಕ್ಕಿ , ಸುಬ್ಬಲಕ್ಷ್ಮಿ ಸಂಸಾರ, ಕಮಲಿ, ಯಾರೇ ನೀ ಮೋಹಿನಿ , ವಿದ್ಯಾವಿನಾಯಕ, ಮಹಾದೇವಿ, ಗಂಗಾ, ಬ್ರಹ್ಮಗಂಟು, ಇತ್ಯಾದಿ ಧಾರಾವಾಹಿಗಳಲ್ಲಿ ಒಂದು ಹೆಣ್ಣು ಮತ್ತೊಂದು ಹೆಣ್ಣನ್ನು ಶೋಷಣೆ ಮಾಡುವ ಕಂತುಗಳು ಪ್ರತಿದಿನ ಮೂಡಿ ಬರುತ್ತಿರುವುದನ್ನು ನೋಡಿ ಬೋರಾಗಿದೆ.

ಉತ್ತಮ ಗುಣವುಳ್ಳ ಒಂದು ಹೆಣ್ಣನ್ನು ಮತ್ತೊಂದು ಹೆಣ್ಣು ದಬ್ಬಾಳಿಕೆ ನಡೆಸುವ ಕಥೆಯನ್ನು ಹೆಣೆದು ಒಂದು ವಾರ ತಳ್ಳುತ್ತಾರೆ. ಒಂದು ಸಣ್ಣ ಘಟನೆಯನ್ನು ಆರು ದಿನ ತೋರಿಸಿ ವೀಕ್ಷಕರ ತಾಳ್ಮೆ ಪರೀಕ್ಷೆ ಮಾಡುತ್ತಾರೆ. ತೊಂದರೆ ಕೊಡುವ ಹಲವಾರು ಘಟನೆಗಳ ಕಂತುಗಳಿಂದ ಧಾರವಾಹಿಗಳು ವಯಸ್ಸಾದಂತೆ ಕಾಣುತ್ತವೆ. ಕೆಲವು ಧಾರಾವಾಹಿಗಳ ಕತೆ ಮುಗಿದಿರುವುದರಿಂದ ಅವುಗಳಿಗೆ ಮುಕ್ತಿ ಕಾಣಿಸಿ ನಿರ್ದೇಶಕರು ಹೊಸ ಕತೆ ಹೆಣೆದು ವೀಕ್ಷಕರ ರಂಜಿಸಲಿ ಎಂಬುದು ನನ್ನ ಅನಿಸಿಕೆ.

—ಪ.ಚಂದ್ರಕುಮಾರ ಗೌನಹಳ್ಳಿ, ಚಿತ್ರದುರ್ಗ

## ನಟನೆಯ ಸೊಗಡು

‘ಮಗಳು ಜಾನಕಿ’ ಒಂದು ಅಪರೂಪದ ಧಾರಾವಾಹಿಯಾಗಿ ಮನಸೆಳೆಯುತ್ತದೆ. ಇಪ್ಪತ್ತು ವರ್ಷಗಳ ಕಾಲ ಜಾನಕಿಗೆ ತನ್ನ ದ್ವೇಷ ತಿಳಿಯದಂತೆ ನಟಿಸಿದ ಭಾರ್ಗಿ ಪಾತ್ರ ಅಸಹಜ ಎನ್ನಿಸಿದರೂ ಪ್ರೇಮ ಭಂಗದಿಂದ ಹತಾಶಳಾಗದೆ ದೃಢ ನಿಲುವು ತಾಳಿ ಬದುಕನ್ನು ಧೈರ್ಯವಾಗಿ ಎದುರಿಸಲು ಹೊರಡುವ ಜಾನಕಿ ಮತ್ತು ಅನಿವಾರ್ಯತೆಗೆ ಶರಣಾಗಿ ಕುತಂತ್ರಕ್ಕೆ ಶಾಮೀಲಾದರೂ ಮದುವೆಯಾಗುವ ಸಂದರ್ಭದಲ್ಲಿ ಯಾವುದನ್ನೂ ಮುಚ್ಚಿಡದೆ ಸತ್ಯ ಹೇಳುವ ನಿರಂಜನ ಹೀಗೆ ಕೆಲವು ಪಾತ್ರಗಳು ಆದರ್ಶ ತತ್ವಗಳ ಚಿಂತೆನೆಗೆ ವೀಕ್ಷಕರನ್ನು ಪ್ರೇರೇಪಿಸುತ್ತವೆ.

ನಟನೆಯಲ್ಲಿ ಛಾಪು ಮೂಡಿಸುತ್ತಿರುವ ಜಾನಕಿ ಪಾತ್ರಧಾರಿ ಮತ್ತು ಮಾತುಗಳಿಗೆ ಶಕ್ತಿ ತುಂಬುವ, ಮುಖ ಭಾವ ತೋರಿಸುವ ನಿರಂಜನ ಪಾತ್ರಧಾರಿ ಭರವಸೆ ಮೂಡಿಸುತ್ತಿದ್ದಾರೆ.

– ಸತ್ಯಬೋಧ, ಬೆಂಗಳೂರು

## ‘ಮಹದೇಶ್ವರ’ ಬಂದಿದ್ದಾನೆ..

ಝೀ ಟಿವಿಯಲ್ಲಿ ಬರುತ್ತಿರುವ ‘ಮಹಾದೇವಿ’ ಧಾರಾವಾಹಿ ನಡುವೆಯೇ ಮತ್ತೊಂದು ಧಾರಾವಾಹಿ ‘ಮಹದೇಶ್ವರ’ ಬರುತ್ತಿರುವುದು ಸಂತಸದ ವಿಷಯ. ಹೊಸ ಹೊಸ ಕಲಾವಿದರನ್ನು ತುಂಬಿಕೊಂಡು ಬರುತ್ತಿರುವ ಮಹದೇಶ್ವರನಿಗೆ ಉಘೇ ಉಘೇ ಎನ್ನೋಣ.

—ಅಂಚೆ ಸುಬ್ರಹ್ಮಣ್ಯ, ಕೊಪ್ಪ

## ಧಾರಾವಾಹಿಗಳ ಹೆಣ್ಣುಗಳು ಹೀಗೇಕೆ?

ಇಂದಿನ ಬಹುತೇಕ ಧಾರಾವಾಹಿಗಳಲ್ಲಿ ಹೆಣ್ಣನ್ನು ಖಳನಾಯಕಿಯನ್ನಾಗಿ ಚಿತ್ರಿಸಲಾಗುತ್ತಿದೆ. ಖಳರಲ್ಲಿ ಲಿಂಗ ಭೇದವಿಲ್ಲ ನಿಜ. ಆದರೆ ಧಾರಾವಾಹಿಗಳಲ್ಲಿ ಚಿತ್ರಿಸುವ ಮಟ್ಟಿಗೆ ಖಂಡಿತವಾಗಿಯೂ ಕೆಟ್ಟವರಿರುವುದಿಲ್ಲ. ದುಷ್ಟ ಅತ್ತೆ, ಮನೆ ಮುರುಕ ಸೊಸೆಯಂದಿರು, ಕಷ್ಟ ಕೊಡುವ ನಾದಿನಿಯಂದಿರನ್ನು ನೋಡಿ ನೋಡಿ ಸಾಕಾಗಿದೆ. ತಾನು ಉಣ್ಣುವ ಮನೆಗೇ ದ್ರೋಹ ಬಗೆಯುವ ಹೆಣ್ಣು ಮಕ್ಕಳನ್ನು ಬಹುಶಃ ಧಾರಾವಾಹಿಗಳಲ್ಲಿ ಮಾತ್ರ ಕಾಣಲು ಸಾಧ್ಯ. ಉದಾತ್ತ ಮನಸ್ಸಿನ, ಒಳ್ಳೆಯದನ್ನೆ ಬಯಸುವ ಹೆಣ್ಣು ಪಾತ್ರಗಳು ಮೂಡಿಬರಲಿ.

—ಹೇಮಲತಾ ಸುಬ್ರಹ್ಮಣ್ಯ, ಆಗುಂಬೆ

## ಈಗ ಪುಟ್ಟ ಮಕ್ಕಳ ಸರದಿ

ಕನ್ನಡ ಟಿವಿ ಧಾರಾವಾಹಿಗಳ ನಿರ್ದೇಶಕರು ಮಮತಾಮಯಿ ಅಜ್ಜಿಯರನ್ನು ಖಳನಾಯಕಿ ಮಾಡಿದ್ದಾಯಿತು. ಈಗ ಹಾಲುಗಲ್ಲದ ಹಸುಳೆಗಳ ಮನಸ್ಸಿನಲ್ಲಿ ವಿಷ ತುಂಬುತ್ತಿದ್ದಾರೆ. ಝೀ ಕನ್ನಡ ವಾಹಿನಿಯ ಮಹಾದೇವಿಯಲ್ಲಿ ಬರುವ ಸೌಗಂಧಿಕಾ ಎಂಬ ಪುಟ್ಟ ಬಾಲಕಿ ಹೂಡುತ್ತಿರುವ ಷಡ್ಯಂತ್ರಗಳು ದೊಡ್ಡವರು ಸಹ ಬೆಚ್ಚಿ ಬೀಳುವ ರೀತಿಯಲ್ಲಿವೆ. ಇದನ್ನೆಲ್ಲ ಪುಟ್ಟ ಮಕ್ಕಳು ಅನುಕರಣೆ ಮಾಡಿದರೆ?

—ದೀಪಕ್ ಕಂಬದಕೋಣೆ, ಕುಂದಾಪುರ

## ವಾಸ್ತವಕ್ಕೆ ದೂರ

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ‘ಪುಟ್ಟ ಗೌರಿ ಮದುವೆ’ ಧಾರಾವಾಹಿಯಲ್ಲಿ ದಿನಾಂಕ 6.9.18ರಂದು ಪ್ರಸಾರವಾದ ಸಂಚಿಕೆಯಲ್ಲಿ ಅಜ್ಜಮ್ಮ ದಾಖಲಾಗಿರುವ ಆಸ್ಪತ್ರೆಯ ಐ.ಸಿ.ಯು.ನಲ್ಲಿ ಬೇವಿನಸೊಪ್ಪು ಹಿಡಿದುಕೊಂಡು ಆಡಿದ ನಾಟಕದ ದೃಶ್ಯ ವಾಸ್ತವಕ್ಕೆ ದೂರವಾಗಿತ್ತು. ಸಾಮಾನ್ಯವಾಗಿ ಎಲ್ಲಾ ಆಸ್ಪತ್ರೆಗಳಲ್ಲಿ ಐ.ಸಿ.ಯು. ನಲ್ಲಿ ದಾಖಲಾಗಿರುವ ರೋಗಿಗಳ ಕಡೆಯವರನ್ನೇ ಒಳಗೆ ಬಿಡುವುದಿಲ್ಲ. ಅಂತಹದರಲ್ಲಿ ಧಾರಾವಾಹಿಯಲ್ಲಿ ಹೇಗೆ ಸಾಧ್ಯವಾಯಿತು? ಯಾವುದೇ ಸನ್ನಿವೇಶವನ್ನು ತೋರಿಸಬೇಕಾದರೆ ಅದು ನೈಜ ಜೀವನಕ್ಕೆ ಹತ್ತಿರವಾಗಬೇಕು. ಇಂತಹ ಅಸಹಜ ಸನ್ನಿವೇಶಗಳಿಂದ ಕೂಡಿದ ಹಲವು ಧಾರಾವಾಹಿಗಳಿಗೆ ಆದಷ್ಟು ಬೇಗ ಮಂಗಳ ಹಾಡಿ.

—ಬಿ. ಚಾಮರಾಜ ಅರಸ್, ಮೈಸೂರು;
ಎನ್.ಕೃಷ್ಣಮೂರ್ತಿ ರಾವ್, ಬೆಂಗಳೂರು

## ತಪ್ಪು ಉಚ್ಚಾರ

ಖಾಸಗಿ ಸುದ್ದಿ ವಾಹಿನಿಗಳಲ್ಲಿ ಕೆಲವು ವಾಹಿನಿಗಳು ನೀಡುವ ಸುದ್ದಿಗಳಲ್ಲಿ ಉಚ್ಚಾರ, ಪರದೆಯಲ್ಲಿ ಗೋಚರಿಸುವ ವಾರ್ತೆಯಲ್ಲಿ ಕಾಗುಣಿತ ಶಬ್ದ ಪ್ರಯೋಗದಲ್ಲಿ, ವಚನ ಇತ್ಯಾದಿಗಳಲ್ಲಿ ಪದೇ ಪದೇ ತಪ್ಪುಗಳಾಗುತ್ತಿವೆ.

ಈಚೆಗೆ ಪ್ರಸಾರವಾದ ಕೇರಳದ ಅತಿವೃಷ್ಟಿಗೆ ಸಂಬಂಧಪಟ್ಟ ಸುದ್ದಿಯಲ್ಲಿ ಉಚ್ಚಾರದಲ್ಲಿ ಮಾತ್ರವಲ್ಲ ಟಿ.ವಿ. ಪರದೆಯಲ್ಲಿಯೂ ‘ಬುದುಕಿರುವವರಿಗೂ ಪ್ರಮಾಣ ಪತ್ರ’ ಎಂಬುದು ಗೋಚರಿಸಿತು. ಇನ್ನೊಂದು ಸುದ್ದಿಯಲ್ಲಿ ಪ್ರಾರಂಭದಲ್ಲಿ ಬಹು ವಚನವಿದ್ದರೆ ಕ್ರಿಯಾಪದದಲ್ಲಿ ಏಕ ವಚನ ಕಂಡಿತು.

ಸುದ್ದಿ ಸಂಪಾದಕರು, ಸುದ್ದಿ ವಾಚಕರು ವೀಕ್ಷಕರಿಗೆ ಶುದ್ಧ ಕನ್ನಡ ಕಾಣುವಂತೆ, ಕೇಳುಗರಿಗೆ ತಪ್ಪಿಲ್ಲದೆ ಕನ್ನಡ ಕೇಳುವಂತೆ ಮಾಡುವುದು ಅಸಾಧ್ಯವಲ್ಲ.

—ಸದಾನಂದ ಹೆಗಡೆಕಟ್ಟೆ, ಮೂಡುಬಿದಿರೆ

## ಖುಷಿ ಕೊಟ್ಟ ವ್ಯಕ್ತಿ ಪರಿಚಯ

06.09.2018ರ ‘ಸುಧಾ’ದಲ್ಲಿ ಪ್ರತಿಸ್ಪಂದನ ಬರಹದ ಅಡಿಯಲ್ಲಿ ಕಲರ್ಸ್ ಸೂಪರ್ ‘ಪಾಪ ಪಾಂಡು’ನ ಚಾರುಲತಾ ಅವರ ಬಗ್ಗೆ ಬಂದ ವ್ಯಕ್ತಿ ಪರಿಚಯ ತುಂಬಾ ಖುಷಿ ಕೊಟ್ಟಿತು. ಅವರ ನಟನೆ ಚುರುಕಾಗಿ ಮತ್ತು ಸಹಜವಾಗಿ ಮೂಡಿ ಬರುವುದರಿಂದ ಅದು ಅಭಿನಯ ಎಂಬ ಭಾವನೆಯೇ ಬರದೆ ತುಂಬಾ ಆಹ್ಲಾದಕರವಾಗಿರುತ್ತದೆ.

—ಮುಸನಾಯಕ, ಬೆಂಗಳೂರು

## ಕನ್ನಡತನ ತೋರಿಸಿ

ಸ್ಟಾರ್ ಸುವರ್ಣದ ‘ಕನ್ನಡದ ಕೋಟ್ಯಧಿಪತಿ’ಯಲ್ಲಿ ವಿವಿಧ ಪ್ರದೇಶ ಮತ್ತು ಸ್ತರದ ಜನ ಭಾಗವಹಿಸುತ್ತಿದ್ದಾರೆ. ಇದು ಜ್ಞಾನಬೋಧಕವೂ, ರಂಜನೀಯವೂ ಆಗಿದೆ. ಒಂದು ಭಾಷೆಯ ಜನಪ್ರಿಯ ಕಾರ್ಯಕ್ರಮವನ್ನು ಮತ್ತೊಂದು ಭಾಷೆಯಲ್ಲಿ ಅನುಕರಿಸುವಾಗ ಕೆಲವು ಸಾಮ್ಯತೆಗಳು ಉಳಿಯುತ್ತವೆ. ‘ಕೋಟ್ಯಧಿಪತಿ’ ಅದಕ್ಕೆ ಹೊರತಾಗಿಲ್ಲ. ಆರಂಭಿಕ ಸಂಗೀತ ಕೂಡ ‘ಕೌನ್ ಬನೇಗಾ ಕರೋಡ್ ಪತಿ’ಯಂತೆಯೇ ಏಕೆ ಇರಬೇಕು? ಇಲ್ಲಿ ನಮ್ಮ ಕನ್ನಡತನವನ್ನು ತೋರಿಸಬಹುದಲ್ಲವೆ? ನಿರೂಪಕ ರಮೇಶ್ ಅರವಿಂದ್ ಬಳಸುವ ‘ಕಾಲಭೈರವ’ ಪದ ಮೃತ್ಯು ಸೂಚಕ. ಅದರ ಬದಲು ‘ಕಾಲದರ್ಶಿ’ ‘ಕ್ಷಣದರ್ಶಿ’ ಇಲ್ಲವೆ ಬೇರೆ ಇನ್ನೇನಾದರೂ ಬಳಸಬಹುದು.

—ಹೇಮಂತ ಸಂಪಗಾಂವಕರ, ಬೆಂಗಳೂರು

